

# ನಟಿ, ನಟನೆ, ಬದುಕು ಮತ್ತು ಬಂದೂಕು

**ನಟನೆಗೂ ಬದುಕಿಗೂ ಇರುವ ಸಂಬಂಧ ಎಷ್ಟು ಗಾಢವಾದದು? ಅದಕ್ಕಿರುವ ತಾತ್ವಿಕ ಆಯಾಮ ಎಂಥದ್ದು? ಹೀಗೆ ಹತ್ತು ಹಲವು ಪ್ರಶ್ನೆಗಳನ್ನು ನಮ್ಮೊಳಗೆ ರಿಂಗಣಿಸುವಂತೆ ಮಾಡುವ ಕಿರುಚಿತ್ರ 'ರೂಬರು'.**

■ ಗೌರಿ

ನಟಿಯರ ಖಾಸಗಿ ಬದುಕು ಮತ್ತು ನಟನೆಗೆ ತಳಕು ಹಾಕುವ ಹಲವು ಸಿನಿಮಾಗಳು ನಮ್ಮಲ್ಲಿ ಬಂದಿವೆ. ಆದರೆ ಅಂಥ ಸಿನಿಮಾಗಳೆಲ್ಲವೂ ಆಯಾ ನಟಿಯರು ಅನುಭವಿಸಿದ ಸಂಕಷ್ಟಗಳನ್ನು, ಚಿತ್ರರಂಗದ ಕ್ರೌರ್ಯಗಳನ್ನು ದಾರುಣವಾಗಿ ತೋರಿಸುವುದರಲ್ಲಿಯೇ ವಿರಮಿಸುತ್ತವೆ. ಅದರಾಚೆಗೆ ನಮ್ಮಲ್ಲಿ ಚಿಂತನೆಯ ಕಿಡಿ ಹೊತ್ತಿಸಬಲ್ಲ ಪ್ರಯತ್ನಗಳು ತೀರಾ ಕಡಿಮೆ. ಆದರೆ, ಅಂಥದ್ದೇ ಒಂದು ಕಥೆಯನ್ನು ಹೇಳುತ್ತಲೇ ಅದಕ್ಕೊಂದು ತಾತ್ವಿಕ ಆಯಾಮವನ್ನೂ ಜೋಡಿಸುವ ಕಿರುಚಿತ್ರ 'ರೂಬರು'.

ರಾಧಾ ಜನಪ್ರಿಯ ನಟಿ. ಆದರೆ ಆ ಜನಪ್ರಿಯತೆಯ ಉತ್ತುಂಗ ಮುಗಿದು ಈಗ ಅವಳ ಬದುಕು ಅಧಃಪತನದತ್ತ ಜಾರುತ್ತಿದೆ. ಚಿತ್ರರಂಗದಲ್ಲಿಯೇ ಇರುವ ಅವಳ ಗೆಳೆಯ ಅವಳನ್ನು ಬದುಕಿನಿಂದಲೂ, ಸಿನಿಮಾದಿಂದಲೂ ಕೈಬಿಟ್ಟಿದ್ದಾನೆ. ಪ್ಲಾಸ್ಟಿಕ್ ಸರ್ಜರಿ ಮಾಡಿಸಿಕೊಂಡ ನಂತರ ಅವಳ ಬಗ್ಗೆ ಚಿತ್ರರಂಗವೇ ಆಡಿಕೊಂಡು ನಗುತ್ತಿದೆ. ಆದರೆ ಇದಾವುದನ್ನೂ ನಿರ್ದೇಶಕರು ಇಲ್ಲಿ ನೇರವಾಗಿ ಹೇಳುವುದಿಲ್ಲ. ಮುಖ್ಯ ಕಥನದ ನಡುವೆಯೇ, ಇಂಥ ಚರ್ವಿತ ಚರ್ವಣ ಕಥನವನ್ನು ಕೆಲವೇ ಸೂಚನೆಗಳ ಮೂಲಕ ಪ್ರೇಕ್ಷಕರಿಗೆ ದಾಟಿಸಿ ಸುಮ್ಮನಾಗುತ್ತಾರೆ.

ಈ ಕಿರುಚಿತ್ರ ಶುರುವಾಗುವುದೇ ಒಂದು ಖಾಲಿ ರಂಗಮಂದಿರದಲ್ಲಿ. ಇಡೀ ಪ್ರೇಕ್ಷಕ ಗ್ಯಾಲರಿ ಖಾಲಿ ಇದೆ. ಮುಂದಿನ ಸಾಲಿನಲ್ಲಿ ನಾಟಕದ ನಿರ್ದೇಶಕ ಕೂತಿದ್ದಾನೆ. ವೇದಿಕೆಯ ಮೇಲೆ ನಾಟಕದ ತಾಲೀಮು ನಡೆಯುತ್ತಿದೆ. ಆ ನಾಟಕದಲ್ಲಿ ರಾಧೆ ನಾಯಕಿಯ ಪಾತ್ರವಹಿಸುತ್ತಿದ್ದಾಳೆ. ಆದರೆ ಅವಳ ವೈಯಕ್ತಿಕ ಬದುಕಿನಲ್ಲಾದ ದುರಂತಗಳ ಕಾರಣಕ್ಕೆ ನಟನೆಯಲ್ಲಿ ಪೂರ್ತಿಯಾಗಿ ತೊಡಗಿಸಿಕೊಳ್ಳಲು ಅವಳಿಗೆ ಸಾಧ್ಯವಾಗುತ್ತಿಲ್ಲ. ಹಾಗಾಗಿ ನಿರ್ದೇಶಕನಿಂದ ಹೀನಾಯವಾಗಿ ಬೈಸಿಕೊಳ್ಳುತ್ತಾಳೆ.

ಆ ನಾಟಕ ವರ್ಜೀನೀಯಾ ವೂಲ್ಫ್ ಎಂಬ ಜನಪ್ರಿಯ ಲೇಖಕಿಯ ಬದುಕನ್ನು ಆಧರಿಸಿದ ನಾಟಕ. ನಾಯಕಿಯಾಗಿ ರಾಧೆ ನಟಿಸುತ್ತಿದ್ದಾಳೆ. ಅವಳಿಗೆ ಅದು ಅಳಿವು ಉಳಿವಿನ ನಾಟಕ. ನಾಟಕದ ಕೊನೆಯಲ್ಲಿ ಅವಳು ತನ್ನ ಮನದ ಮಾತನ್ನು ಬರೆಯಲಾಗದ, ಮನಸ್ಸಿಗೆ ಹಿಡಿಸದ್ದನ್ನು ಬರೆಯಲೇಬೇಕಾದ ಅನಿವಾರ್ಯವನ್ನು ಒಪ್ಪಿಕೊಳ್ಳಲಾಗದೆ ಗುಂಡು ಹೊಡೆದುಕೊಂಡು ಆತ್ಮಹತ್ಯೆ ಮಾಡಿಕೊಳ್ಳುವ ಸನ್ನಿವೇಶ ಇರುತ್ತದೆ. ಅದನ್ನೇ ರಾಧೆ ನಟಿಸಬೇಕಿರುತ್ತದೆ. ನಿರ್ದೇಶಕನಿಂದ ಬೈಸಿಕೊಂಡ ರಾಧೆಗೆ ಆ ನಾಟಕದಲ್ಲಿ ತಾನು ಸೋಲುವುದು ಮತ್ತು ಸಾಯುವುದು ಒಂದೇ ಅನಿಸಿಬಿಡುತ್ತದೆ. ನಾಟಕದಲ್ಲಿ ಬಳಸುವ ಖಾಲಿ ಪಿಸ್ತೂಲಿನ ಬದಲಿಗೆ ತನ್ನ ಖಾಸಗಿ ಪಿಸ್ತೂಲಿನಲ್ಲಿ ಒಂದು ಬುಲೆಟ್ ಹಾಕಿ ಇಟ್ಟುಕೊಳ್ಳುತ್ತಾಳೆ.

ಅಂದು ನಾಟಕದಲ್ಲಿ ರಾಧೆ ಇಡೀ ರಂಗಮಂದಿರ ಸ್ತಬ್ಧಗೊಳ್ಳುವಂತೆ, ಎಲ್ಲರ ಹೃದಯ ಕಲಕುವಂತೆ ನಟಿಸುತ್ತಾಳೆ. ಕೊನೆಯ ದೃಶ್ಯದಲ್ಲಿ ತನ್ನದೇ ಪಿಸ್ತೂಲು ತೆಗೆದುಕೊಂಡು ಟ್ರಿಗರ್ ಅದುಮುತ್ತಾಳೆ. ಅದೊಂಥರ ಅದೃಷ್ಟದ ಆಟ, ಬುಲೆಟ್ ಸಿಡಿಯದೇ ಬದುಕುಳಿಯುತ್ತಾಳೆ. ಆದರೆ ಆ ವಿಷಯ ಅವಳಿಗೆ ಮಾತ್ರ ಗೊತ್ತಿದೆ.

ಹೀಗೆ ನಟನೆ ಮತ್ತು ಬದುಕು ಎರಡನ್ನೂ ಬಹುಸೂಕ್ಷ್ಮ ಹಿನ್ನೆಲೆಯಲ್ಲಿ ಸಮೀಕರಿಸುತ್ತ ಬರುವ ನಿರ್ದೇಶಕರು ಕೊನೆಯಲ್ಲಿ ನಾಯಕಿಯ ಬಾಯಲ್ಲಿ ಒಂದು ಮಾತು ಹೇಳಿಸುತ್ತಾರೆ. ರಾಧೆಯ ಅಭಿನಯ ಮೆಚ್ಚಿಕೊಂಡು ಅಭಿಮಾನಿಯೊಬ್ಬಳು, 'ನೀವು ಹೇಗೆ ಅಷ್ಟು ಅದ್ಭುತವಾಗಿ ಮಾಡಿದೀರಿ?' ಎಂದು ಕೇಳಿದಾಗ ರಾಧೆ, 'ಅದನ್ನೇ ನಟನೆ ಎನ್ನುವುದು' ಅನ್ನುತ್ತಾಳೆ. ಮೇಲ್ನೋಟಕ್ಕೆ ಸಹಜ ಮಾತಿನಂತೇ ಕಾಣಿಸುವ ಅದು, ನಾಯಕಿಯ ಪಿಸ್ತೂಲಿನೊಳಗಿದ್ದ ಬುಲೆಟ್‌ನ ಹಿನ್ನಲೆಯಲ್ಲಿ ನೆನಪಿಸಿಕೊಂಡರೆ ದಿಗ್ಭ್ರಮೆ ಹುಟ್ಟಿಸುವಂಥ ಮಾತು. ಪ್ರೇಕ್ಷಕರಿಗೆ ಅದು ಬರೀ ನಟನೆ. ಆದರೆ ರಾಧೆಗೆ ಅದು ಮರುಹುಟ್ಟು. ಇನ್ನೊಂದು ಕ್ಷಣದಲ್ಲಿ ನಿಜದ ಬುಲೆಟ್ ಸಿಡಿದು ತಲೆ ಹೋಳಾಗಬಹುದು ಎಂಬ ಕ್ಷಣದಲ್ಲಿ ಹುಟ್ಟಿದ ನಟನೆ ಅದು. ಅದು ಬರಿ ನಟನೆಯೇ? ನಟನೆ ಎಂದರೆ 'ಮಾಡು ಇಲ್ಲವೇ ಮಡಿ' ಸ್ಥಿತಿಯೂ ಹೌದಲ್ಲವೇ? ಹಾಗಾದರೆ ನಟನೆಗೂ ಬದುಕಿಗೂ ಇರುವ ಸಂಬಂಧ ಎಷ್ಟು ಗಾಢವಾದದು? ಅದಕ್ಕಿರುವ ತಾತ್ವಿಕ ಆಯಾಮ ಎಂಥದ್ದು? ಹೀಗೆ ಹತ್ತು ಹಲವು ಪ್ರಶ್ನೆಗಳನ್ನು ನಮ್ಮೊಳಗೆ ರಿಂಗಣಿಸುತ್ತಲೇ ಹೋಗುತ್ತದೆ ರಾಧಾಳ ಒಂದು ಮಾತು. ಈ ಕಾರಣಕ್ಕಾಗಿಯೇ ಇದು ಅಚ್ಚುಕಟ್ಟಾಗಿ ಕಥೆ ಹೇಳುವ ಮಾಮೂಲಿ ಕಿರುಚಿತ್ರವಾಗುವುದರ ಜೊತೆಗೆ ನಮ್ಮೊಳಗನ್ನು ಕಲಕುವ ಗಾಢ ಧ್ವನ್ಯರ್ಥಗಳನ್ನು ಹೊಮ್ಮಿಸುವ ಪ್ರಯತ್ನವೂ ಆಗಿ ಯಶಸ್ವಿಯಾಗಿದೆ. ನಿರ್ದೇಶಕಿ ಟಿಸ್ಕಾ ಚೋಪ್ರಾ ಅವರೇ ನಾಯಕಿಯ ಪಾತ್ರದಲ್ಲಿ ನಟಿಸಿದ್ದು ವಿಶೇಷ ಕಿರುಚಿತ್ರಕ್ಕೆ ಪ್ರಭೆಯನ್ನು ನೀಡಿದೆ.



**ಹೆಸರು:** ರೂಬರು
**ನಿರ್ದೇಶಕಿ:** ಟಿಸ್ಕಾ ಚೋಪ್ರಾ
**ನಿರ್ಮಾಣ:** ವಿಫುಲ್ ಡಿ. ಶಾ
**ತಾರಾಗಣ:** ಟಿಸ್ಕಾ ಚೋಪ್ರಾ, ಅರ್ಜುನ್ ಮಾಥೂರ್, ಚಿತ್ರಶ್ರೀ ರಾವತ್
**ಛಾಯಾಗ್ರಹಣ:** ಸಿರ್ಸಾ ರೇ
**ಸಂಗೀತ:** ರಾಜಾನಾರಾಯಣ
**ಧ್ವನಿ ವಿನ್ಯಾಸ:** ವಿಶ್ವದೀಪ್ ದೀಪಕ್ ಚಟರ್ಜಿ
**ಸಂಕಲನ:** ಅನಂತ್ ಸಿಂಗ್, ಕೊನಾರ್ಕ್ ಸಕ್ಸೇನಾ

ಈ ಕಿರುಚಿತ್ರ ವೀಕ್ಷಣೆಗೆ bit.ly/38sT20U ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.